# ನಿಮ್ಮೊಡನೆ

## ಎಳೆಯ ಮನಗಳಲ್ಲಿ ಹಿಂಸೆಯ ಬೀಜಗಳ ಚಿಗುರು ಶಿಕ್ಷಣ ಹಾಗೂ ಮೌಲ್ಯವ್ಯವಸ್ಥೆ ವಿಮರ್ಶೆಗಿದು ಸಕಾಲ

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ವಸತಿಶಾಲೆಯ ಒಂಬತ್ತನೇ ತರಗತಿಯ ವಿದ್ಯಾರ್ಥಿಯೊಬ್ಬ ಕುಡಿಯುವ ನೀರಿಗೆ ಇಲಿ ಪಾಷಾಣ ಸೇರಿಸಿದ್ದಾನೆ. ವಿಷ ಬೆರೆತ ನೀರನ್ನು ಕುಡಿದು ಮೂವರು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ಸಮಸ್ಯೆಯಾದರೆ ಶಾಲೆಗೆ ರಜೆ ದೊರೆತು, ಊರಿಗೆ ಹೋಗಬಹುದು ಎನ್ನುವ ಉದ್ದೇಶದಿಂದ ವಿದ್ಯಾರ್ಥಿ ನೀರಿಗೆ ವಿಷ ಬೆರೆಸಿದ್ದಾನೆ ಎನ್ನಲಾಗಿದೆ. ಮತ್ತೊಂದು ಘಟನೆಯಲ್ಲಿ, ನಾಲ್ಕನೇ ತರಗತಿ ವಿದ್ಯಾರ್ಥಿಯೊಬ್ಬನನ್ನು ಅವನ ಸಹಪಾಠಿಗಳೇ ಕೈವಾರದಿಂದ 108 ಬಾರಿ ಚುಚ್ಚಿ ಗಾಯಗೊಳಿಸಿದ್ದಾರೆ. ಈ ಹಿಂಸಾತ್ಮಕ ಘಟನೆ ನಡೆದಿರುವುದು ಮಧ್ಯಪ್ರದೇಶದ ಇಂದೋರ್‌ನ ಶಾಲೆಯೊಂದರಲ್ಲಿ. ದೆಹಲಿಯಲ್ಲಿ ಹದಿನಾರು ವರ್ಷದ ಹುಡುಗನೊಬ್ಬ ತನಗಿಂತಲೂ ಒಂದು ವರ್ಷ ದೊಡ್ಡವನಾದ ಮತ್ತೊಬ್ಬ ಹುಡುಗನನ್ನು ಚಾಕುವಿನಿಂದ 60 ಬಾರಿ ಚುಚ್ಚಿ ಕೊಂದಿದ್ದಾನೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆದಿರುವ ಈ ಪ್ರಕರಣಗಳು ನಮ್ಮ ಮಕ್ಕಳಲ್ಲಿ ಹಿಂಸೆಯ ಬೀಜಗಳು ಮೊಳೆಯುತ್ತಿವೆಯೇ ಎನ್ನುವ ಅನುಮಾನ ಉಂಟುಮಾಡುವಂತಿವೆ.

ಅಪರಾಧ ಕೃತ್ಯಗಳಲ್ಲಿ ಮಕ್ಕಳು ಭಾಗಿಯಾಗುವ ಘಟನೆಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿರುವುದು ಆತಂಕಕಾರಿ. ಮಕ್ಕಳ ನಡುವೆ ಜಗಳಗಳಾಗುವುದು ಅಸಹಜವೇನಲ್ಲ. ಆದರೆ, ಹಲ್ಲೆ–ಕೊಲೆ–ಅತ್ಯಾಚಾರದಂತಹ ಘಟನೆಗಳಲ್ಲಿ ಮಕ್ಕಳು ಭಾಗಿಯಾಗುವುದನ್ನು ನಾಗರಿಕ ಸಮಾಜದಲ್ಲಿ ಕಲ್ಪಿಸಿಕೊಳ್ಳುವುದು ಕಷ್ಟ. ಎಳೆಯ ತಲೆಮಾರು ಹಿಂಸೆಯನ್ನು ಮೈಗೂಡಿಸಿಕೊಂಡರೆ, ಸಮಾಜದ ನಾಳೆಗಳು ಆರೋಗ್ಯಕರವಾಗಿರುವುದು, ನೆಮ್ಮದಿಯಿಂದ ಕೂಡಿರುವುದು ಹೇಗೆ?

ಗಣನೀಯ ಸಂಖ್ಯೆಯ ಮಕ್ಕಳು ಅಪರಾಧ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಿರುವುದನ್ನು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ಅಂಕಿಅಂಶಗಳು ದೃಢಪಡಿಸಿವೆ. ದಾಖಲೆಗಳ ಪ್ರಕಾರ, ಪ್ರತಿವರ್ಷ ಸುಮಾರು 900 ಮಕ್ಕಳು ಕೊಲೆ ಪ್ರಕರಣಗಳಲ್ಲಿ ನೇರವಾಗಿ ಭಾಗಿಯಾಗುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅಪ್ರಾಪ್ತ ವಯಸ್ಕರ ಮೇಲೆ ಪ್ರತಿವರ್ಷ 30 ಸಾವಿರ ಪ್ರಕರಣಗಳು ದಾಖಲಾಗುತ್ತಿವೆ. ಭಾರತದಂತಹ ಬೃಹತ್ ದೇಶದಲ್ಲಿ ಈ ಸಂಖ್ಯೆ ನಗಣ್ಯವೆನ್ನುವುದು ನಿಜವಾದರೂ, ದಾಖಲೆಗಳಿಂದ ಹೊರಗುಳಿದ ಕೃತ್ಯಗಳನ್ನು ಊಹಿಸಿಕೊಂಡರೆ ಎಳೆಯ ತಲೆಮಾರು ಸಾಗುತ್ತಿರುವ ದಾರಿ ಆತಂಕ ಉಂಟುಮಾಡುವಂತಿದೆ. ಕ್ರೌರ್ಯದ ಮನೋಭಾವವನ್ನು ಕೇವಲ ಅಪರಾಧ ಕೃತ್ಯಗಳಿಂದಷ್ಟೇ ಅಳೆಯದೆ, ಒರಟು ವರ್ತನೆಯನ್ನೂ ಗಮನಕ್ಕೆ ತೆಗೆದುಕೊಂಡರೆ, ಮಕ್ಕಳ ಮನಸ್ಸು ಎಷ್ಟರಮಟ್ಟಿಗೆ ಒರಟಾಗಿದೆ ಎನ್ನುವುದನ್ನು ಅಂದಾಜು ಮಾಡಿಕೊಳ್ಳಬಹುದು.

ಎಳೆಯರ ಮನಸ್ಸು ಹಿಂಸೆಯನ್ನು ರೂಢಿಸಿಕೊಳ್ಳುವುದಕ್ಕೆ ಅನೇಕ ಕಾರಣಗಳಿವೆ. ಸರಳವಾಗಿ ಹೇಳುವುದಾದರೆ, ಈ ಬದಲಾವಣೆಯ ಹಿಂದೆ ಶಿಕ್ಷಣ ವ್ಯವಸ್ಥೆಯ ವೈಫಲ್ಯ ಇರುವಂತೆಯೇ, ಕೌಟುಂಬಿಕ ವ್ಯವಸ್ಥೆಯಲ್ಲಾಗಿರುವ ಪಲ್ಲಟಗಳ ಪಾತ್ರವೂ ಇದೆ. ವ್ಯಕ್ತಿತ್ವ ವಿಕಸನ ಹಾಗೂ ಮೌಲ್ಯ ಪ್ರತಿಪಾದನೆಯಿಂದ ದೂರ ಸರಿಯುತ್ತಿರುವ ಶಿಕ್ಷಣ ವ್ಯವಸ್ಥೆ, ಪರೀಕ್ಷೆಗಳಲ್ಲಿ ಅಂಕ ಗಳಿಕೆಯನ್ನೇ ಗುರಿಯಾಗಿಸಿಕೊಂಡಿರುವುದು ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವಂತಿದೆ; ಸ್ಪರ್ಧೆಯ ತುರುಸು ಚಿಣ್ಣರ ಮನಸ್ಸನ್ನು ಒರಟಾಗಿಸುತ್ತಿದೆ. ಭೋಗಸಂಸ್ಕೃತಿ ಜನಪ್ರಿಯಗೊಂಡಂತೆಲ್ಲ ಮೌಲ್ಯಸಂಸ್ಕೃತಿ ಸವಕಳಿಯಾಗುತ್ತದೆ. ಅದರ ಪರಿಣಾಮ ಮಕ್ಕಳ ಮೇಲೂ ಆಗುತ್ತಿದೆ; ಎಳೆಯರು ಅನಾರೋಗ್ಯಕರ ಚಟಗಳಿಗೆ ತುತ್ತಾಗುತ್ತಿದ್ದಾರೆ. ಮಾದಕ–ಮಾರಕ ವಸ್ತುಗಳ ಜಾಲವೊಂದು ಎಳೆಯರನ್ನೇ ಗುರಿಯಾಗಿಸಿಕೊಂಡು ಸಕ್ರಿಯವಾಗಿದೆ.

ಗೆಳೆಯರ ಸ್ಥಾನವನ್ನು ಡಿಜಿಟಲ್ ಸಲಕರಣೆಗಳು ಆವರಿಸಿಕೊಂಡಿರುವ ಕಾಲಘಟ್ಟದಲ್ಲಿ, ಮಕ್ಕಳ ಮನಸ್ಸಿನ ಆರ್ದ್ರತೆಯನ್ನು ಕಸಿದುಕೊಳ್ಳುವಲ್ಲಿ ವಿಡಿಯೊ ಗೇಮ್‌ಗಳ ಪಾತ್ರವೂ ಇದೆ. ಬಹುತೇಕ ವಿಡಿಯೊ ಗೇಮ್‌ಗಳು ಹೊಡಿ–ಬಡಿ ನಡವಳಿಕೆಯನ್ನು ಉತ್ತೇಜಿಸುವಂತಿರುತ್ತವೆ. ಆಕ್ರಮಣಕಾರಿ ಆಟದ ಹೆಸರಿನಲ್ಲಿ ಮಕ್ಕಳು ಹಿಂಸೆಯನ್ನು ವಿನೋದದಂತೆ ಭಾವಿಸತೊಡಗುತ್ತಾರೆ. ದಾಳಿಕೋರ ಮನೋಭಾವವನ್ನು ಉದ್ದೀಪಿಸುವ ಆಟಿಕೆಗಳು ಕೂಡ ಮಕ್ಕಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ. ನಡವಳಿಕೆಯಲ್ಲಿ ಮಾತ್ರವಲ್ಲದೆ ಮಕ್ಕಳ ಮಾತಿನಲ್ಲೂ ಆಕ್ರಮಣಕಾರಿ ಮನೋಭಾವ ಕಾಣಿಸುತ್ತಿದೆ. ಮತ್ತೊಬ್ಬರನ್ನು ಹಳಿಯಲಿಕ್ಕೆ, ತೇಜೋವಧೆ ಮಾಡುವುದಕ್ಕೆ ಮಾತನ್ನು ಬಳಸುವ ದೊಡ್ಡವರ ಲೋಕದ ನಡವಳಿಕೆ ಮಕ್ಕಳ ನಡುವೆಯೂ ಕಾಣಿಸಿಕೊಂಡಿದೆ. ಮಕ್ಕಳ ಮಾತು–ಕೃತಿ ಎರಡರಲ್ಲೂ ಬಾಲ್ಯಸಹಜವಾದ ಕೋಮಲತೆ ಕ್ಷೀಣಿಸತೊಡಗಿ, ದೊಡ್ಡವರ ಒರಟುತನ ಹಾಗೂ ಕಹಿ ಕಾಣಿಸಿಕೊಳ್ಳುತ್ತಿದೆ.

ಸಂಸ್ಕೃತಿಯ ಬಗ್ಗೆ ಹೆಮ್ಮೆಯಿಂದ ಮಾತನಾಡುವವರ ಸಂಖ್ಯೆ ನಮ್ಮ ನಡುವೆ ಹೆಚ್ಚುತ್ತಿದೆ. ಆದರೆ, ಈ ಹೆಮ್ಮೆ ಮಾತಿಗೆ ಸೀಮಿತಗೊಳ್ಳದೆ ಅನುಸರಣೆಯಲ್ಲಿ ವ್ಯಕ್ತವಾಗದೆ ಹೋದರೆ ಯಾರಿಗೂ ಉಪಯೋಗವಿಲ್ಲ. ಮನುಷ್ಯಸಹಜವಾದ ಪ್ರೀತಿಪ್ರೇಮ, ಸಹೋದರ ಭಾವ, ಸಹಕಾರ, ಸಮಾನತೆ, ಸೌಹಾರ್ದ – ಇವುಗಳನ್ನು ಹೊರತುಪಡಿಸಿದ ಸಂಸ್ಕೃತಿ ಯಾವುದಾದರೂ ಇರುವುದೇ? ಆದರೆ, ಈ ಮೌಲ್ಯಗಳನ್ನು ನಡೆಯಲ್ಲಿ ಅಳವಡಿಸಿಕೊಳ್ಳದೆ ಹೋದರೆ, ನುಡಿಯಲ್ಲಿನ ಸಂಸ್ಕೃತಿ ಸೋಗಿನದಾಗಿಬಿಡುತ್ತದೆ. ಇಂಥ ಸೋಗೇ ಮಕ್ಕಳನ್ನು ಹಿಂಸಾವಿನೋದಿಗಳನ್ನಾಗಿಸುತ್ತದೆ.

■ ರಘುನಾಥ ಚ.ಹ.

ಭೋಗಸಂಸ್ಕೃತಿ ಜನಪ್ರಿಯಗೊಂಡಂತೆಲ್ಲ ಮೌಲ್ಯಸಂಸ್ಕೃತಿ ಸವಕಳಿಯಾಗುತ್ತದೆ. ಅದರ ಪರಿಣಾಮ ಮಕ್ಕಳ ಮೇಲೂ ಆಗುತ್ತಿದೆ; ಎಳೆಯರು ಅನಾರೋಗ್ಯಕರ ಚಟಗಳಿಗೆ ತುತ್ತಾಗುತ್ತಿದ್ದಾರೆ. ಮಾದಕ–ಮಾರಕ ವಸ್ತುಗಳ ಜಾಲವೊಂದು ಎಳೆಯರನ್ನೇ ಗುರಿಯಾಗಿಸಿಕೊಂಡು ಸಕ್ರಿಯವಾಗಿದೆ.



ಈಶ್ವರ್